ಐನೂರು ರೂಪಾಯಿ ನೋಟುಗಳನ್ನು ಸಿಗಿಸಲಾಗಿದೆ. ಹಾರದ ಭಾರಕ್ಕೆ ಬುಡೇನ್ ಸಾಬಿ ಸ್ಟೇಜ್ ಮೇಲೆ ಉಸಿರು ಕಟ್ಟಿ ಬೀಳುತ್ತಾನೆ. ಜನ ಓಹೋ ಎಂದು ಸ್ಟೇಜ್ ಕಡೆ ನುಗ್ಗುತ್ತಾರೆ. ಗಾಬರಿಯಾಗಿ ಬುಡೇನ್ ಸಾಬನಿಗೆ ಎಚ್ಚರವಾಗಿ ಲೈಟ್ ಹಾಕುತ್ತಾನೆ. ಗೋಡೆಯ ಗೂಟಕ್ಕೆ ನೇತುಹಾಕಿದ್ದ ಮಾಸಿದ, ದೂಳು ಹಿಡಿದಿದ್ದ ಕೀಲುಗೊಂಬೆ ಬುಡೇನ್ ಸಾಬಿಯನ್ನು ನೋಡಿ ನಗುತ್ತಿತ್ತು. ಆ ಹೊತ್ತಿನಲ್ಲಿ ಅವನಿಗೆ ಕೀಲುಗೊಂಬೆಯನ್ನು ಆಡಿಸಬೇಕೆನಿಸಿ ಎದ್ದು ಕೀಲುಗೊಂಬೆಯನ್ನು ಕೈಗೆತ್ತಿಕೊಂಡು ಸ್ವಲ್ಪ ಹೊತ್ತು ಆಡಿಸಿ, ಸುಸ್ತಾದಂತಾಗಿ ಗೂಟಕ್ಕೆ ನೇತುಹಾಕಿ ಮತ್ತೆ ಮಲಗಿದ್ದ.

ಬೆಳಿಗ್ಗೆ ಅತಾವುಲ್ಲಾನು ಕೊರಟಗೆರೆಯ ಬಂಡೀಗೌಡನ ಅಂಬಾಸಿಡರ್ ಮಾತನಾಡಿಕೊಂಡು ಬಂದು ಬಾಗಿಲು ತಟ್ಟಿದಾಗಲೇ ಬುಡೇನ್ ಸಾಬಿಗೆ ಎಚ್ಚರವಾಗಿದ್ದು. "ಎಲೆ ಇವ್ನ, ಆಗ್ಲೆ ಹೊತ್ತುಟ್ಟಿ ಎರಡು ಮಾರ್ ಆಗ್ಯೆತಲ್ಲಪ್ಪ..." ಎಂದು ಬುಡೇನ್ ಸಾಬಿಯು ಕೆರೆ ಕಡೆ ಹೋಗಿ ಬಂದು ಮುಖ ತೊಳೆದುಕೊಂಡು ರೆಡಿಯಾದ. ಎದೆಯಲ್ಲಿ ನೋವು ಕಾಣಿಸಿಕೊಂಡಿತ್ತಲ್ಲದೆ ಕೆಮ್ಮಿನ ಜೊತೆ ಮೈ ಕೂಡಾ ಬೆಚ್ಚಗಾಗಿತ್ತು. ಕಾರು ಹತ್ತುವ ಮುನ್ನ ಇಪ್ಪತ್ತು ಸಾವಿರ ರೂಪಾಯಿಗಳನ್ನು ಅತಾವುಲ್ಲಾನ ಕೈಗಿಟ್ಟು "ನಿನ್ನತ್ರ ಇಟ್ಕೊ. ನಂಗ್ಯಾಕೊ ಮತ್ತೆ ಊರಿಗೆ ವಾಪಸ್ಸು ಬರೋದಿಲ್ಲ ಅನ್ನಿಸ್ತಾ ಐತೆ. ದುಡ್ಡೇನಾದ್ರೂ ಮಿಕ್ಕಿದ್ರೆ ನಿನ್ ಮಕ್ಕಳ ಓದಿಗೆ ಬಳುಸ್ಕ. ನಿನ್ನೆಂಡ್ತಿ ಸುಮಾರ್ ದಿನ ಹಿಟ್ ಬೇಸಾಕವ್ಳೆ..." ಎಂದು ಭಾವುಕನಾಗಿದ್ದ. ಅತಾವುಲ್ಲಾನಿಗೂ ಬುಡೇನ್ ಸಾಬಿಯ ಮಾತು ಕೇಳಿ ಎದೆ ತುಂಬಿ ಬಂದಿತ್ತು. "ಹೇ ಯಾಸಟ್ಗೆ ಬುಡ್ತು ಅನ್ನು. ಅಂಥ ಮಾತೆಲ್ಲ ಆಡ್ಬೇಡ. ಹುಟ್ಟಿದ ಮನುಷ್ಯ ಒಂದಿನ ಹೋಗ್ಲೇಬೇಕು. ಪರ್ಮನೆಂಟಾಗಿ ಇಲ್ಲಿ ಯಾರ್ ತಾನೆ ಗೂಟ ವಡ್ಕಂಡ್ ಕುಂತಿರ್ತಾರೆ..." ಎಂದು ಪ್ರೀತಿಯಿಂದ ರೇಗಿದ್ದ. ಬಂಡೀಗೌಡ ಅಂಬಾಸಿಡರ್ ಟ್ಯಾಕ್ಸಿ ಇಟ್ಟುಕೊಂಡು ಬೆಂಗಳೂರು, ತುಮಕೂರು, ಗೌರಿಬಿದನೂರು, ಚಿಕ್ಕಬಳ್ಳಾಪುರ ಮುಂತಾದ ಪಟ್ಟಣಗಳನ್ನು ಸುತ್ತುತ್ತಿದ್ದುದ್ದರಿಂದ ಕಿಲಾಡಿತನವನ್ನು ಕಲಿತಿದ್ದ. ಯಾವುದೇ ಆಫೀಸು, ಆಸ್ಪತ್ರೆಗಳಿಗೆ ಧೈರ್ಯದಿಂದ ನುಗ್ಗುತ್ತಿದ್ದ. ಮಾತಿನಲ್ಲೇ ಮರುಳು ಮಾಡಿ ಸಂಬಂಧ ಪಟ್ಟವರ ಕೈ ಬೆಚ್ಚಗೆ ಮಾಡಿ ಬೇಗನೇ ಕೆಲಸ ಮಾಡಿಸಿಬಿಡುತ್ತಿದ್ದ. ಮಧ್ಯಾಹ್ನ ಎರಡು ಗಂಟೆಗೆ ಕಾರು ವಿಕ್ಟೋರಿಯಾ ಆಸ್ಪತ್ರೆ ಗೇಟ್ ಪ್ರವೇಶಿಸಿದಾಗ ಬುಡೇನ್ ಸಾಬಿಗೆ ಭಯದಿಂದ ಮೈ ನಡುಗತೊಡಗಿತ್ತು. ಅವನು ಇದುವರೆಗೂ ಯಾವೊತ್ತೂ ಆಸ್ಪತ್ರೆ ಕಾಂಪೌಂಡ್ ಕೂಡಾ ಪ್ರವೇಶಿಸಿದವನಲ್ಲ.

ಬಂಡೀಗೌಡನು ಆಸ್ಪತ್ರೆಯ ಅಟೆಂಡರ್ ಒಬ್ಬನನ್ನು ಹಿಡಿದು, ಐನೂರು ಜೇಬಿಗಿಟ್ಟಿದ್ದ. ಎರಡೂವರೆ ಗಂಟೆಗಳ ಕಾಲ ಮೂರ್ನಾಲ್ಕು ಕಡೆ ಮಲಮೂತ್ರ, ರಕ್ತ ಪರೀಕ್ಷೆ ಮಾಡಿಸಿ, ಎಕ್ಸ್ ರೇ ತೆಗೆಸಿ, ಶರೀರವನ್ನು ಸ್ಕ್ಯಾನ್ ಮಾಡಿಸಿ ದೊಡ್ಡ ಡಾಕ್ಟರ್ ಮುಂದೆ ಕೂರಿಸಿದ್ದ ಅಟೆಂಡರ್. ಬಂಡೀಗೌಡ ಡಾಕ್ಟರರಿಗೂ ಅಟೆಂಡರ್ ಕಡೆಯಿಂದ ಎರಡು ಸಾವಿರ ಮುಟ್ಟಿಸಿದ್ದ. ಡಾಕ್ಟರ್ ಮುತುವರ್ಜಿಯಿಂದ ಬುಡೇನ್ ಸಾಬಿ, ಅತಾವುಲ್ಲಾ, ಬಂಡೀಗೌಡ ಮೂವರನ್ನೂ ಕೂರಿಸಿಕೊಂಡು ಎಲ್ಲಾ ಪರೀಕ್ಷೆಗಳ ಫಲಿತಾಂಶದ ಹಾಳೆಗಳನ್ನು, ಎಕ್ಸ್ ರೇಯನ್ನು ಮುಂದಿಟ್ಟುಕೊಂಡು ಗಂಭೀರವಾಗಿ ಪರೀಕ್ಷಿಸಿ, "ನೋಡ್ರಿ, ಬುಡೇನ್ ಸಾಬರಿಗೆ ಟಿಬಿ ಕಾಯಿಲೆ ಸೀರಿಯಸ್ ಆಗಿರುವುದಲ್ಲದೆ ಏಡ್ಸ್ ಕಾಯಿಲೆಯೂ ತುಂಬಾ ಮಿತಿಮೀರಿ ಹೋಗೈತೆ. ಮೂರ್ನಾಲ್ಕು ವರ್ಷಗಳ ಹಿಂದೆಯೇ ತೋರಿಸ್ಕೊಬೇಕಿತ್ತು. ಎಲ್ಲಾ ಕಾಯ್ಲೆಗ್ಳೂ ಮೀರೋಗವ್ವೆ. ಇವೊತ್ತೋ ನಾಳೇನೋ. ಸಾಕ್ಷಾತ್ ಬ್ರಹ್ಮ ಬಂದು ಪ್ರಯತ್ನ ಪಟ್ರೂ ಉಳಿಸಿಕೊಳ್ಳೋಕಾಗಲ್ಲ. ಇವೊತ್ತಿನವರೆಗೂ ಇವರು ಉಸಿರಾಡ್ತಾ ಇರೋದೇ ಪರಮಾಶ್ಚರ್ಯ. ಯಂಗೂ ಕಾರಲ್ಲಿ ಬಂದಿದ್ದೀರಿ, ವಾಪಸ್ಸು ಕರ್ಕೊಂಡು ಹೋಗಿ..." ಎಂದು ನೇರಾನೇರ ಹೇಳಿಬಿಟ್ಟಿದ್ದರು. ಡಾಕ್ಟರ್ ಮಾತು ಕೇಳಿಕೊಂಡು ರೂಮಿನ ಜಂತಿಯ ಕಡೆ ನೋಡುತ್ತಿದ್ದ ಬುಡೇನ್ ಸಾಬಿಯ ಕಿವಿಗೆ ರೂಮಿನ ಮೂಲೆಯಿಂದ ಹಲ್ಲಿ ಲೊಚ್ ಲೊಚ್ ಎಂದು